# 'ಶ್ಮಶಾನ ಕುರುಕ್ಷೇತ್ರಂ' ನಾಟಕ: ಪಾತ್ರಗಳ ಸೃಷ್ಟಿಯಲ್ಲಿನ ಅನನ್ಯತೆ

ഡാമവെമിസമ്യമ ചരങ
അശൈശൈമിേ ജ്യീളലശൈ്യ
ഉലു്യമ്യാേലിേ ീള ഗമിീമറമ
ഏീല്യിാലിേ എശ്യൈ ഏ്യമറല ജീഹഹലഴല ഗീുമ
ഇവശസസമാമഴമഹൗ്യൗ, ഗമ്യിമമേസമ

ಕವಿಯ ದೃಷ್ಟಿ ಹಾಗೂ ಸೃಷ್ಟಿ ಕಾರ್ಯಗಳು ಸದಾ ಜಾಗೃತಾವಸ್ಥೆಯಲ್ಲಿ ಇರುತ್ತವೆ. ಇಂತಹ ಎಚ್ಚರ ಸ್ಥಿತಿಯಿಂದಾಗಿ ಕವಿಯು ಸಮಕಾಲೀನ ಸಂಗತಿಗಳನ್ನು ಹಾಗೂ ಅಧ್ಯಯನ ಮಾಡಿದ ಸಾಹಿತ್ಯವನ್ನು ಜೀವ ಪ್ರಜ್ಞೆಯ ತಳಪಾಯದಡಿ ವೀಕ್ಷಿಸಿ, ವಿಶ್ಲೇಷಿಸಿ, ವಿಮರ್ಶೆಗೊಳಪಡಿಸುತ್ತಾರೆ. ತಮ್ಮ ವಿಮರ್ಶಾತ್ಮಕ ಅಭಿವ್ಯಕ್ತಿಗೆ ಸಾಹಿತ್ಯದ ಭಾಷೆಯನ್ನು ಮಾಧ್ಯಮವಾಗಿಸಿಕೊಳ್ಳುತ್ತಾರೆ. ಅವುಗಳಿಗೆ ಕಥೆ, ನಾಟಕ ಕಾವ್ಯ, ಕವಿತೆ, ಪ್ರಬಂಧಗಳ ರೂಪವನ್ನು ಕೊಡುತ್ತಾರೆ. ಇಲ್ಲಿ ಸಾಹಿತಿಯೂ ತಾನು ಕಂಡದ್ದನ್ನು ಹಾಗೂ ಹೇಳಬೇಕಾದುದನ್ನು ತನ್ನ ಹೆಸರಿನಿಂದ ಅನಾವರಣಗೊಳಿಸದೆ, ಸೂಕ್ತ ಪಾತ್ರಗಳನ್ನು ಸೃಷ್ಟಿಸಿ ಅವುಗಳ ಆವರಣ ಮತ್ತು ಆಂತರ್ಯದಲ್ಲಿ ನಿಂತು ಧ್ವನಿಯಾಗುತ್ತಾರೆ. ಆಗ ಕವಿಯ ವಿಚಾರಗಳು ತಾವು ಸೃಷ್ಟಿಸಿದ ಪಾತ್ರಗಳ ಮೂಲಕ ಜೀವಂತಿಕೆಯ ತನುವಾಗಿ ಚಿರಂತನವಾಗುತ್ತವೆ ಅಥವಾ ಬದಲಾದ ಕಾಲಘಟ್ಟದಲ್ಲಿ ಮತ್ತೊಮ್ಮೆ ತಮ್ಮನ್ನು ಪರಾಮರ್ಶೆಗೆ ಒಳಪಡಿಸಿಕೊಳ್ಳುತ್ತವೆ. ಕಾದಂಬರಿ, ನಾಟಕ ಮತ್ತು ಕಾವ್ಯಗಳಲ್ಲಿ ಸಾಹಿತಿ ಸೃಷ್ಟಿಸಿದ ಪಾತ್ರಗಳು ಕಾಲ್ಪನಿಕತೆಯ ಎಲ್ಲೆಯನ್ನು ದಾಟಿ ಜಗದೊಳಗೆ ಕಾಣಸಿಗುವ ಮಾನವನ ಗುಣಾವಗುಣಗಳ ಮಾದರಿಯಾಗಿ ಬಿಡುತ್ತಾರೆ ಅಥವಾ ಪ್ರತಿನಿಧಿಗಳಂತೆ ಕಾಣುತ್ತಾರೆ. ಸಾಹಿತ್ಯ ಲೋಕದೊಳಗಿನ ಕವಿಸೃಜನೆಯ ಸಾಕಷ್ಟು ಪಾತ್ರಗಳು ಓದುಗರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ವಿಮರ್ಶೆಗೆ ದಾರಿಯನ್ನು ತೋರುವ ಕೈಮರಗಳಾಗಿಯೂ ಕೆಲಸ ಮಾಡಿವೆ.

ಕುವೆಂಪು ಅವರ ಕಾದಂಬರಿ ಮತ್ತು ನಾಟಕಗಳಲ್ಲಿ ನಿಸರ್ಗಪ್ರೀತಿ, ಜೀವಪರ ಒಲವು ಮತ್ತು ನಿರ್ಲಕ್ಷಿತರ ಪರವಾದ ಧ್ವನಿಯನ್ನು ಮೇಲ್ನೋಟಕ್ಕೆ ಆದ್ಯೀಕರಿಸಬಹುದು. ಬಹುಮುಖ್ಯವಾಗಿ ಸಾಮಾಜಿಕ ಶ್ರೇಣಿಯಲ್ಲಿ ಶೂದ್ರ ಮತ್ತು ದಲಿತರಲ್ಲೇ ರೂಢಿಯಲ್ಲಿದ್ದ ಶೋಷಣೆಯ ವ್ಯವಸ್ಥೆಗಳನ್ನು ತೋರಿಸಲು ಚಂದ್ರೇಗೌಡಕಾಳಸೋಮತಿಮ್ಮನಂತಹ ಪಾತ್ರಗಳನ್ನು; ವೈದಿಕ ಮನಸ್ಥಿತಿಗಳು ಈ ಸಮುದಾಯಗಳನ್ನು ಮೌಢ್ಯರನ್ನಾಗಿಸುತ್ತಿದ್ದ ಚಿತ್ರಣಗಳನ್ನು ಚಿತ್ರಿಸಲು ವೆಂಕಪ್ಪಯ್ಯಕಣ್ಣಾ ಪಂಡಿತನಂತಹ ಪಾತ್ರಗಳನ್ನು; ಈ ರೀತಿಯಾಗಿ ಮೌಢ್ಯ ಮತ್ತು ಪಾರತಂತ್ರ್ಯಕ್ಕೆ ಒಳಪಡಿಸಿಕೊಳ್ಳುತ್ತಿದ್ದ ಆಚರಣೆಗಳ ವಿರುದ್ಧ ಕ್ರಾಂತಿಕಾರಕ ಮತ್ತು ವೈಜ್ಞಾನಿಕ ಮನೋಭಾವದ ಪ್ರತಿಭಟನೆಯನ್ನು ತೋರಿಸಲು ಹೂವಯ್ಯನಂತಹ ಪಾತ್ರಗಳನ್ನು; ಸಹಜ ಮತ್ತು ನಿರ್ಮಲವಾದ ಪ್ರೀತಿಪ್ರೇಮಪ್ರಣಯಗಳು ತಳಸಮುದಾಯಗಳಲ್ಲಿ ಜೀವಂತವಾಗಿರುವುದನ್ನು ಗುತ್ತಿತಿಮ್ಮಿ, ಐತ ಪೀಚಲು ಪಾತ್ರಗಳನ್ನು ಪ್ರತಿನಿಧಿ ರೂಪದಲ್ಲಿ ಸಾಹಿತ್ಯ ಜಗತ್ತಿಗೆ ಪರಿಚಯಿಸಿದರು. ಇಲ್ಲಿ ಕುವೆಂಪು ಅವರ ಮನೋಭೂಮಿಕೆಯಲ್ಲಿ ಜನಿಸಿದ

ಪಾತ್ರಗಳೊಂದಿಗೆ ಅನುಭವದ ಮೂಸೆಯಿಂದ ಒಡಮೂಡಿದ ಪಾತ್ರಗಳು ಸೇರಿವೆ. ಆದರೆ ಕುವೆಂಪು ಅವರ ಬಹುಪಾಲು ನಾಟಕಗಳು (ಶೂದ್ರ ತಪಸ್ವಿ, ಬೆರಳ್ಗೆ ಕೊರಳ್ ಶ್ಮಶಾನ ಕುರುಕ್ಷೇತ್ರ, ಕಾನೀನ ಮೊದಲಾದವು) ವೈದಿಕ ಪುರಾಣಗಳ ಹಿನ್ನೆಲೆಯಲ್ಲಿ ರಚಿಸಲ್ಪಟ್ಟು, ರಾಮರಾವಣ, ಸೀತೆ, ಮಂಥರೆ, ಶೂದ್ರಕಾದಿ ಪಾತ್ರಗಳು ಮರುಹುಟ್ಟು ಪಡೆದು ಹೊಸ ವ್ಯಾಖ್ಯಾನಗೊಂಡಿವೆ. ಅಲ್ಲದೆ, ಇತಿಹಾಸಪರಾಣಗಳಲ್ಲಿ ನೆಲೆಕಂಡುಕೊಳ್ಳದ, ಅತಿ ನಿರ್ಲಕ್ಷಕ್ಕೆ ಒಳಪಟ್ಟ ಸಾಮಾನ್ಯ ಜನತೆಯನ್ನು ಪಾತ್ರಗಳಾಗಿ ನಿಲ್ಲಿಸಿ ಮನಬಿಚ್ಚಿ ಮಾತನಾಡಿಸಿದ್ದಾರೆ. ಪುರಾಣ ಪಾತ್ರಗಳೊಂದಿಗೆ ಅವರನ್ನು ಮುಖಾಮುಖಿಯಾಗಿಸಿದ್ದಾರೆ. ಸಾಹಿತ್ಯವನ್ನು ಅಸ್ತ್ರವಾಗಿಸಿಕೊಂಡು ಸಮಸಮಾಜ ಕಟ್ಟುವ, ಜೀವಪರ ಚಿಂತನೆ ಮಾಡುವ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ಕಾರ್ಯಗಳನ್ನು ಮಾಡಿದ್ದಾರೆ.

ಬಹುತೇಕ ಕವಿಗಳು ತಮ್ಮ ನಾಟಕ ಮತ್ತು ಕಾದಂಬರಿಗಳಲ್ಲಿ ಕಾಲ್ಪನಿಕ ಅಥವಾ ತಾವು ಎದುರುಗೊಂಡ ವ್ಯಕ್ತಿತ್ವಗಳನ್ನೇ ಪಾತ್ರಗಳಾಗಿ ಸೃಷ್ಟಿಸಿದರೆ ಕುವೆಂಪು ಅವರು ಪುರಾಣ ಪಾತ್ರಗಳಿಗೆ ಮರುವ್ಯಾಖ್ಯಾನ ಮಾಡುವ ಕಾರ್ಯದೊಂದಿಗೆ ಹೊಸ ಪಾತ್ರಗಳನ್ನೂ ಸೃಷ್ಟಿಸಿದರು. ಕುವೆಂಪು ಅವರ ಈ ಪ್ರಯೋಗವು ಸಾಹಿತ್ಯಲೋಕದ ಅಪೂರ್ವ ಮಾದರಿಗಳಲ್ಲೊಂದು. ಪ್ರಸ್ತುತ ಈ ಲೇಖನವು ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ಸೃಷ್ಟಿಸಿದ ಪಾತ್ರಗಳ ಅನನ್ಯತೆಯನ್ನು ವಿಶ್ಲೇಷಣೆಯನ್ನು ಮಾಡುತ್ತದೆ. "ತಮ್ಮ ನಾಟಕಗಳಲ್ಲಿ ಕುವೆಂಪು ಹಳೆಯ ಸಾಮಗ್ರಿಯನ್ನು ಎರಡು ರೀತಿಯಲ್ಲಿ ಬಳಸಿಕೊಂಡಿದ್ದಾರೆ: ವಿಸ್ತರಣೆ ಮತ್ತು ಪರಿಷ್ಕರಣ, 'ಶಶಾನ ಕುರುಕ್ಷೇತ್ರಂ' ದಂತಹ ನಾಟಕದಲ್ಲಿ ವಿಸ್ತರಣವಿದ್ದರೆ, 'ಬೆರಳ್ಗೆ ಕೊರಳ್' 'ಶೂದ್ರ ತಪಸ್ವಿ'ಗಳಲ್ಲಿ ಪರಿಷ್ಕರಣವಿದೆ. 'ಬೆರಳ್ಗೆ ಕೊರಳ್'ನಲ್ಲಿ ದೇಶಧರ್ಮ ಪ್ರತಿಮಿತವಾಗಿದ್ದರೆ, 'ಶ್ಮಶಾನ ಕುರುಕ್ಷೇತ್ರ'ದಲ್ಲಿ ಕಾಲಧರ್ಮ ಪ್ರತಿಮಿತವಾಗಿದೆ; ಅದರ ಬೀಸು ದೊಡ್ಡದು, ಭವಿಷ್ಯಗ್ರಾಹಿಯಾದುದು; ಸರ್ವೋದಯದ ಕಂಡರಣೆ ಅಲ್ಲಿದೆ."(ಕುವೆಂಪು ಸಾಹಿತ್ಯ ಸಂವಾದ, ಸಿಪಿಕೆ, ಪು.83)

ಶ್ಮಶಾನ ಕುರುಕ್ಷೇತ್ರಂ ನಾಟಕವು ಪುರಾಣದ ನೆಲೆಗಟ್ಟಿನಲ್ಲಿ ರಚಿತವಾಗಿದ್ದರೂ ಅದರಲ್ಲಿ ಕುವೆಂಪು ಅವರ ಸ್ವಂತಿಕೆಯ ಛಾಯೆಯು ಎದ್ದು ಕಾಣುತ್ತದೆ. "ಶ್ಮಶಾನ ಕುರುಕ್ಷೇತ್ರಂ' ಯುದ್ಧದ ಭೀಕರತೆಯನ್ನು, ಅದರ ನಿಷ್ಪ್ರಯೋಜನತೆಯನ್ನೂ ಸಾರಿ ಹೇಳುವ ನಾಟಕ, ಯುದ್ಧದ ಪರಿಣಾಮವನ್ನು ಇಷ್ಟೊಂದು ಪರಿಣಾಮಕಾರಿಯಾಗಿ ಹೇಳುವ ನಾಟಕಗಳು ಜಗತ್ತಿನ ಸಾಹಿತ್ಯದಲ್ಲಿಯೇ ಅತಿ ವಿರಳ. ಯುದ್ಧದ ಅನಿರ್ವಚನೀಯ ಘೋರ ಪರಿಣಾಮಗಳನ್ನು ತೋರುತ್ತಾ ಅದರ ಬಗ್ಗೆ ಹೇಸಿಗೆ ಉಂಟು ಮಾಡಿ ಜನರನ್ನು ಎಚ್ಚರಿಸುವುದೇ ಈ ನಾಟಕದ ಉದ್ದೇಶವಾಗಿದೆ."(ಕುವೆಂಪು ಒಂದು ಪುನರನ್ವೇಷಣೆ, ಸಂ: ಡಿ.ಎಸ್. ನಾಗಭೂಷಣ ಪು.216) ಕುವೆಂಪು ಅವರು ಇಲ್ಲಿ ಪಾಂಡವಕೌರವಕೃಷ್ಣಾದಿಗಳ ಕಥೆಯನ್ನು ಶ್ರೀಸಾಮಾನ್ಯರ ಬದುಕಿನೊಂದಿಗೆ ಮುಖಾಮುಖಿಯಾಗಿಸಿದ್ದಾರೆ. ವ್ಯಾಸ, ಪಂಪ ಮತ್ತು ಕುಮಾರವ್ಯಾಸರಲ್ಲೂ ಕಾಣ ಸಿಗದ ಚಾಣೂರ, ನೀಲಾಕ್ಷ, ಗೀರ್ವಾಣ, ಮುದುಕಿ, ಮಾತೆ, ಕಂದ ಮೊದಲಾದ ಶ್ರೀಸಾಮಾನ್ಯರನ್ನು ಪಾತ್ರವಾಗಿಸಿ ಮನೋರಂಗಕ್ಕೆ ತಂದರು. ಯುದ್ಧಗಳ ಗೆಲುವು ಸೋಲುಗಳ ಪರಾಮರ್ಶೆಯಲ್ಲಿ ರಾಜ ಮತ್ತು ರಾಜ ಪ್ರಮುಖರ ನಲಿವುಸೋಲುಸಾವುಗಳೇ ದಾಖಲೆಯಾಗಿ ಉಳಿದಿವೆಯೇ ಹೊರತು ರಾಜನ ಆಜ್ಞಾ ಪಾಲಕರಾಗಿ ನಿಂತು ರಣಭೂಮಿ, ರಾಜಧಾನಿ, ಅರಮನೆಗಳಲ್ಲಿ ಶತ್ರುಗಳ ಆಯುಧಾಘಾತಕ್ಕೆ ಅಸುನೀಗಿದ ಸೈನಿಕರು; ಯುದ್ಧದ ಕ್ರೌರ್ಯಕ್ಕೆ ತುತ್ತಾದ

ಜನಸಾಮಾನ್ಯರ ಗೋಳುಸಾವುತ್ಯಾಗಮಾನಭಂಗಗಳ ಉಲ್ಲೇಖವು ಇತಿಹಾಸ ಮತ್ತು ಪುರಾಣ ಕೃತಿಗಳಲ್ಲಿ ಕಾಣಸಿಗುವುದಿಲ್ಲ. ಆದರೆ ಯುದ್ಧಾನಂತರದ ಪರಿಣಾಮಗಳನ್ನು ಯುದ್ಧೋತ್ಸಾಹಿ ನಾಯಕರು ಅರಿಯಬೇಕು ಹಾಗೂ ರಾಜತ್ವವಿರಲಿ ಅಥವಾ ಪ್ರಜಾಪ್ರಭುತ್ವವಿರಲಿ ಸಾಮಾನ್ಯ ನಾಗರಿಕರ ಹಿತರಕ್ಷಣೆ ಹಾಗೂ ಜೀವಪರ ಕಾಳಜಿಯನ್ನು ತೋರಬೇಕು ಎಂಬ ಸಾರ್ವಕಾಲಿಕ ಸತ್ಯದ ಪ್ರತಿಪಾದನೆಗಾಗಿ ತಕ್ಕ ಕಾಲ, ಪ್ರಸಂಗ ಮತ್ತು ಆಕರವನ್ನು ಕುವೆಂಪು ಅವರು ಬಳಸಿಕೊಂಡರು.

193040ರ ದಶಕದಲ್ಲಿ ಜಗತ್ತು ಮೊದಲ ಮಹಾಯುದ್ಧದ ಯಾತನೆಗಳಿಂದ ಹೊರಬರಲು ಚಿಂತಿಸುತ್ತಿದ್ದ ಸಮಯದಲ್ಲೇ ಮತ್ತೊಂದು ಮಹಾಕದನದ ಕ್ಷಣಗಣನೆ ಆರಂಭವಾಗಿತ್ತು. ಸಾಮ್ರಾಜ್ಯಶಾಹಿಗಳಿಗೆ ಯುದ್ಧದ ದಾಹವಿದ್ದರೆ ಜನಸಾಮಾನ್ಯರು ಯುದ್ಧಗಳಿಂದಾಗಿ ಜೀವ ದಹನಗೊಳ್ಳುವುದೆಂಬ ಆತಂಕದಲ್ಲಿದ್ದರು. "ಶ್ರೀ ಸಾಮಾನ್ಯವೇ ಭಗವಾನ್ ಮಾನ್ಯ; ಶ್ರೀಸಾಮಾನ್ಯವೆ ಭಗವದ್ ಧನ್ಯ; ಸಾಮಾನ್ಯತೆ ಭಗವಂತ ರೀತಿ; ಸಾಮಾನ್ಯವೆ ದಿಟ ಭಗವತ್ ಪ್ರೀತಿ" (ಶ್ರೀಸಾಮಾನ್ಯರ ದೀಕ್ಷಾಗೀತೆ1956:ಕುವೆಂಪು) ಎಂಬ ಅವರ ಜೀವ ಪ್ರಜ್ಞೆ ಮತ್ತು ವಿಶ್ವಮಾನವ ಚಿಂತನೆಯು ಯುದ್ಧಾನಂತರದಲ್ಲಿ ಜೀವ ಮತ್ತು ಮಾನ ಹಾನಿಗಳು ರಾಜಪ್ರಜೆಯೆಂಬ ಭೇದವೆಣಿಸದು; ಇಲ್ಲಿ ಗೆದ್ದವರು ಸೋತವರು ಸಮಾನ ದುಃಖಿಗಳೆಂಬ ವಿಶ್ವ ಸತ್ಯವನ್ನು ಅರ್ಥೈಸಲು ಕೌರವಪಾಂಡವರೊಂದಿಗೆ ಮಾತೆ, ಕಂದ, ಮುದುಕಿ, ಸೈನಿಕರ ಪಾತ್ರಗಳನ್ನು ಶ್ರೀಸಾಮಾನ್ಯರ ಪ್ರತಿನಿಧಿಯಾಗಿಸಿ ನಮ್ಮೆದುರು ಪ್ರತಿಷ್ಠಾಪಿಸಿದ್ದಾರೆ. ಹೀಗೆ ಕನ್ನಡ ಮಾರ್ಗ ಸಾಹಿತ್ಯ ಬಹುವಾಗಿ ನಿರ್ಲಕ್ಷಿಸಿದ್ದ ಸಾಮಾನ್ಯ ಮನುಷ್ಯರು ಕುವೆಂಪು ಅವರಲ್ಲಿ ತುಂಬ ಶ್ರದ್ಧೆಯಿಂದ ಪ್ರಸ್ತಾಪಗೊಳ್ಳುವ ಸಂಗತಿಯು ಆಕಸ್ಮಿಕವೇನಲ್ಲ. ಪ್ರಜಾ ಪ್ರಭುತ್ವದ ಮೊಳಕೆಗಳೊಡೆದು ಸಮಾನತೆಯ ಹೂಚಿಗುರನ್ನು ಮೂಡಿಸುತ್ತಿದ್ದ ಕಾಲವಾಗಲಿ, ನವೋದಯದ ಉದಾರವಾದಿ ಮಾನವತಾವಾದದ ತಾತ್ವಿಕತೆಯಾಗಲಿ ಅಥವಾ ಗಾಂಧಿ ವಿವೇಕಾನಂದರ ಚಿಂತನೆಗಳಾಗಲಿ ಇದಕ್ಕೆ ಕಾರಣವಾಗುವಷ್ಟೇ ಕುವೆಂಪು ಅವರು ರೂಪುಗೊಂಡು ಬಂದ ಸಾಮಾಜಿಕ ಪರಿಸರವೂ ಕಾರಣವೆಂದು ಅನಿಸುತ್ತದೆ. (ಪ್ರತಿ ಸಂಸ್ಕೃತಿ, ರಹಮತ್ ತರೀಕೆರೆ, ಪು.115)

ಯುದ್ಧ ಭೂಮಿಯು ವೀರ, ರೌದ್ರ, ಭೀಬತ್ಸ ದೃಶ್ಯಗಳಿಗೆ ಮಾತ್ರ ಆಕರವಾಗಿತ್ತು. ಇಂತಹ ಸಾಂಪ್ರದಾಹಿಕ ಚೌಕಟ್ಟನ್ನು ಪೂರ್ವಸೂರಿಯಾದ ರನ್ನನ ಬಳಿಕ ಕುವೆಂಪು ಅವರು ಉಲ್ಲಂಘಿಸಿ ಹೊಸಪಥವನ್ನು ನಿರ್ಮಿಸಿದರು. ಯುದ್ಧಗಳು ಸಾವು, ಸೋಲು, ಕ್ರೌರ್ಯ, ಹಿಂಸೆಗಳೊಂದಿಗೆ ಹೆಂಡತಿಯರಲ್ಲಿ ವಿಧವೆಯಾಗುವ ಅಥವಾ ಮಾನಾಘಾತಕ್ಕೆ ಒಳಗಾಗುವ ಆತಂಕಕ್ಕೆ, ಮಕ್ಕಳು ಅನಾಥರಾಗುವ ಸಂಕಟಕ್ಕೆ, ಯೌವ್ವನದ ಮಗನನ್ನು ಕಳೆದುಕೊಂಡು ಆಧಾರಹೀನವಾಗುವ ಮುಪ್ಪಿನ ಜೀವಗಳ ವೇದನೆಗಳಿಗೆ ದಾರಿ ಮಾಡಿಕೊಡುತ್ತದೆ. ಇಂತಹ ದುಸ್ಥಿತಿಯಿಂದ ರಾಜ ಕುಟುಂಬಕ್ಕಾಗಲಿ ಅಥವಾ ಶ್ರೀಸಾಮಾನ್ಯರಾಗಲಿ ವಿನಾಯಿತಿ ಎಂಬುದು ದುರ್ಲಭವೇ ಸರಿ. ಶ್ಮಶಾನ ಕುರುಕ್ಷೇತ್ರಂ ನಾಟಕದಲ್ಲಿನ ದೃಶ್ಯ2ರಲ್ಲಿ ಯುದ್ಧದಿಂದ ಸಂತ್ರಸ್ತರಾದವರ ಪ್ರತಿನಿಧಿಯಂತಿರುವ ಗಂಡನ ಶವವನ್ನು ಹುಡುಕುವ ಮಾತೆ ತನ್ನ ಕಂದನಿಗೆ ಸಾವಿನ ವ್ಯಾಖ್ಯಾನ ನೀಡುವಾಗ,"...ಇನ್ನಿವನ ಇಂಚರದ ಕೊರಲಿಂದ ಮಾನವರಾಡುವ ಮಾತುಗಳು ಹೊರಹೊಮ್ಮಲಾರವು: ನಾಲಗೆಯಳಿದಿಹುದು! ಇನ್ನೀತ ನೆದೆಯಲಿ ಸತಿಪ್ರೇಮ, ಸುತವಾತ್ಸಲ್ಯ, ಬಂಧುಮಮತೆ, ಕರುಣೆ, ನಯ, ದಯೆ ಮೊದಲಾದ ಮಾನವೀಯ ದಿವ್ಯಭಾವಗಳಲಿ

ಒಂದಾದರೂ ಮೂಡಲರಿದು!... ಬರುವವರು ಹೇಳದಿಹ, ಇರುವವರು ಕಾಣದಿಹ, ಹೋದವರು ಬಾರದಿಹ ಸಾವಿನ ನಾಡು ಇವನಿಗೆ ಬೀಡು! ಈಗಳೀತಂಗೆ ಪಿತೃತ್ವವಿಲ್ಲ, ಪತಿತ್ವವಿಲ್ಲ, ಬಂಧುತ್ವಮಿಲ್ಲ, ಶತ್ರುತ್ವಮಿಲ್ಲ! ಈತನಿಗಳಣ್ಣನೂ ಅಲ್ಲ, ತಮ್ಮನೂ ಅಲ್ಲ."(ಶ್ಮಶಾನ ಕುರುಕ್ಷೇತ್ರಂ, ಕುವೆಂಪು) ಎಂದು ವ್ಯಥೆಯಿಂದ ಹೇಳುವ ನುಡಿಗಳಲ್ಲಿ ಯುದ್ಧ ಬಿಟ್ಟುಹೋಗುವ ವೇದನೆಯ ಭೀಕರತೆ ತೆರೆದುಕೊಳುತ್ತದೆ.

"ಇದೇನ್ ಕೊಲೆಯಾಟವೋ ಇಳೆಯ ಎನ್ನ ಕಂದರಿಗೆ ನಾನರಿಯೆನ್!", "ಅಂತುಆ ಶ್ರೀಮಂತರ ಕಲಹಾಗ್ನಿಗೆ ಯಜ್ಞಪಶುಗಳಮ್ಮೆಂತಹ ದರಿದ್ರುಲ್ತೆ!", "ನಮ್ಮವೋಲಿಹ ಬಡಜನಂಗಳೆಲ್ಲ ಮಂಕುಗಳಮ್ಮಾ. ಪಾಂಡವರ್ ಕೌರವ ನೆಲಕೆ ಹೊಯ್ದಾಡಿದರೆ ನಮ್ಮ ಮಕ್ಕಳ ಅವರಿವರಂ ಕೆಳೆಗೊಂಡು ನಿಂತು ಹೆಮ್ಮೆಗೆ ಬಡಿದಾಡಿ ಮಡಿಯುವರ್. ನನ್ನ ಮಗುಗೆ ನಿನ್ನಾತನ ಮೇಲೆ ಪಗೆಯೇನ್? ನಾವಿರ್ವರುಂ ದುಃಖಾರ್ತರಮ್ಮಾ!" ಈ ರೀತಿಯ ಮುದುಕಿಯ ನುಡಿಗಳಲ್ಲಿ ಇತಿಹಾಸ ಪುರಾಣಗಳಂತೆ ಆಧುನಿಕರು ಸಹ ಸಮರಾಸಕ್ತರೆಂಬುದು ತೋರುತ್ತದೆ. ಪಕ್ಷ ಅಥವಾ ನಾಯಕನ ಹೆಸರಿನ ಮುನ್ನಲೆಯಲ್ಲಿ ಸಮೂಹಸನ್ನಿಗೊಳಗಾದ ಇಂದಿನ ಯುವಜನರ ಮನೋಸ್ಥಿತಿಯನ್ನು ಬಿತ್ತರಿಸಿದಂತಿದೆ. "ಇಲ್ಲಿ ಪಾಂಡವರು, ಕೌರವರು ಕೇವಲ ಸಂಕೇತಗಳು, ಇವು ಹಿಂದುಮುಸ್ಲಿಆ, ಕನ್ನಡಮರಾಠಿ, ಭಾರತಪಾಕಿಸ್ತಾನ ಮೊದಲಾದವುಗಳಿಗೆ ಸಂಕೇತ. ಇವುಗಳ ಮಧ್ಯೆ ಯಾರೋ ವೈಷಮ್ಯವನ್ನು ಹುಟ್ಟುಹಾಕಿದಾಗ ಹೆಣಗಳುದುರುವುದು ದಿನದಿನದ ದುಡಿಮೆಗೆ ಹೋಗುವ ಬಡಜನಗಳದ್ದೇ ಹೊರತೂ ಬೇರೆ ಅಲ್ಲ."(ವಿಮರ್ಶೆಸಂಶೋಧನೆಶಾಸನ ಸಂಸ್ಕೃತಿ, ಲೇ.ಪ್ರೊ.ಎಸ್. ಆರ್. ನಾಯಕ, ಪು17), ಹೀಗೆ ಮುದುಕಿಯಂತಹ ಸಾಮಾನ್ಯ ನಾಗರಿಕರ ಮಾತುಗಳಲ್ಲಿ ಕಾಣ ಸಿಗುವ ಸಾಮಾಜಿಕ ಹಾಗೂ ಜೀವಪರ ಚಿಂತನೆಗಳು ನಮ್ಮ ನಾಯಕರಲ್ಲಿ(ರಾಜಕೀಯ ಮತ್ತು ಧಾರ್ಮಿಕ) ಸುಳಿಯಗೊಡದ ಬಗ್ಗೆ ಕವಿ ಬೆಳಕು ಚೆಲ್ಲುತ್ತಲೇ ಆತಂಕಗೊಳ್ಳುತ್ತಾರೆ.

ಕುವೆಂಪು ಸೃಜಿಸಿದ ಗೀರ್ವಾಣ, ಚಾಣೂರ ಮತ್ತು ನೀಲಾಕ್ಷರೆಂಬ ಪಾತ್ರಗಳು ಕೌರವೇಂದ್ರನ ಸಾಮಾನ್ಯ ಸೈನಿಕರು. ಇವರಿಗೆ ಕೌರವನಲ್ಲಿ ಅಪಾರ ಸ್ವಾಮಿನಿಷ್ಠೆ. ತನ್ನೊಡೆಯನ ಪರಾಭವವನ್ನು ತಿಳಿದು, ದುರ್ವಿಧಿಯನ್ನು ಆರೋಪಿಸಿ, ಕಟ್ಟಕಡೆಯ ಸೇವೆಯನ್ನು ಸಲ್ಲಿಸಿ ಪುಣ್ಯಪಡೆಯುವ ಇಚ್ಛೆಯೊಂದಿಗೆ ಆತನಿರುವ ತಾಣವನ್ನು ಅರಸುತ್ತಾ ನಡೆದರು. ಇಲ್ಲಿ ಕೌರವನ ಪ್ರಜಾಕಾಳಜಿ ಹಾಗೂ ಸಾಮಾನ್ಯ ಸೈನಿಕರೊಂದಿಗಿನ ಸ್ನೇಹಭಾವ ಒಡನಾಟದಿಂದಾಗಿ ಪ್ರಜಾಪ್ರಿಯನಾಗಿದ್ದನೆಂಬುದು ಚಾಣೂರ ಹೇಳಿದ,"... ಎಮ್ಮೊಡೆಯನ ಎದೆಯನರಿವ ನಲ್ಪತೆಯೊಂದನ್ ನಿಮಗೊರೆವೆನ್" ಎಂಬ ಕಥನದಿಂದ ಸ್ಪಷ್ಟವಾಗುತ್ತದೆ. ಈ ದೃಶ್ಯ ಮತ್ತು ಹೊಸ ಪಾತ್ರಗಳ ಹೆಣಿಗೆಯ ಮೂಲಕ ಹೊಳವೊಂದನ್ನು ಕುವೆಂಪು ಅವರು ಕಂಡಿದ್ದಾರೆ. ರಾಜತ್ವವಿರಲಿ ಪ್ರಭುತ್ವವಿರಲಿ ನಾಯಕನಲ್ಲಿ ಜನತೆಯು ಒಮ್ಮೆ ಕಟ್ಟಿಕೊಳ್ಳುವ ಗಟ್ಟಿ ಅಭಿಪ್ರಾಯವು ಸುಲಭಕ್ಕೆ ಇಬ್ಭಾಗವಾಗುವುದಿಲ್ಲ. ನಾಯಕನ ಬದ್ಧತೆ ಅಥವಾ ಪಕ್ಷ ಬದಲಾದರೂ ಸಾಮಾನ್ಯ ಅನುಯಾಯಿಗಳು ತಮ್ಮ ನಾಯಕನತ್ತ ಅಭಿಮಾನ ಶೂನ್ಯರಾಗುವುದಿಲ್ಲ. ಅವರ ಸ್ವಾಮಿನಿಷ್ಠೆ ಸುಲಭಕ್ಕೆ ಅಲುಗುವುದಿಲ್ಲ. ಆದರೆ ಇಂತಹ ನಿಷ್ಠೆ ನಾಯಕರಲ್ಲೂ ಇರಬೇಕಾದುದು ಪ್ರಜಾತಂತ್ರ ಬೆಳವಣಿಗೆಯಲ್ಲಿ ಚೇತನದಾಯಕ ಅಂಶವೆಆಬುದನ್ನು ಪ್ರತಿಪಾದಿಸಿದ್ದಾರೆ.

ಕುವೆಂಪು ಅವರ ಪಾತ್ರ ಸೃಷ್ಟಿಯಲ್ಲಿನ ಅನನ್ಯತೆಗೆ ಈ ನಾಟಕದಲ್ಲಿನ ಕಲಿದೇವ ಮತ್ತು ದ್ವಾಪರದೇವ ಪಾತ್ರಗಳೇ ಸಾಕ್ಷಿ. ಪ್ರತಿಯೊಂದು ವಸ್ತುವನ್ನು ಪ್ರತಿಮಾ ದೃಷ್ಟಿಯಿಂದ ಕಾಣುವ ಕುವೆಂಪು ಅವರ ಕಾಣ್ಕೆಯು ಮನುಷ್ಯರಲ್ಲದ ಪಾತ್ರಗಳನ್ನು ಸೃಜಿಸಿ ಕಥೆಯ ಓಘಕ್ಕೆ ಕುತೂಹಲದ ತಿರುವುಗಳನ್ನು ತರತ್ತಾರೆ. ಇಂತಹ ಪ್ರತಿಮಾ ಸೃಷ್ಟಿಗಳಿಗೆ ನಿದರ್ಶನ ದ್ವಾಪರದೇವ ಮತ್ತು ಕಲಿದೇವ. "ಯುದ್ಧದ ಭೀಕರತೆಯನ್ನು ಜನಮಾನಸಕ್ಕೆ ಮುಟ್ಟಿಸಿ, ಅವರು ಮುಂದೆ ಯುದ್ಧವೆಂದರೆ ಹತ್ತು ಸಾರಿ ಯೋಚಿಸುವಂತೆ ಮಾಡಲು ಈ ಪಾತ್ರಗಳು, ಇವುಗಳ ಭಾವಗಳು ಮತ್ತು ಮಾತುಗಳು ಪರಿಣಾಮಕಾರಿಯಾಗಿವೆ…ಕೆಡವುವವರಿಗೆ ಕಟ್ಟುವವರ ಕಷ್ಟ ಗೊತ್ತಾಗುವುದಿಲ್ಲ. ಒಂದು ಯುಗವನ್ನು ಕಟ್ಟಿದ ಯುಗದ ನಾಯಕನಿಗೆ ಅದರ ಮಹತ್ವ ಗೊತ್ತಿರುತ್ತದೆ. ಕಷ್ಟಪಟ್ಟು ಬೆವರು ಸುರಿಸಿ ಕಟ್ಟಿದ್ದು ಕಟ್ಟಕಡೆಗೆ ಮುಚ್ಚಳಿದು ಹೋದಾಗ ಗೋಳಾಡುವುದು ಮಾತ್ರ ನಾಯಕನ ಪಾಲಿಗಿರುತ್ತದೆ(ವಿಮರ್ಶೆಸಂಶೋಧನೆಶಾಸನಸಂಸ್ಕೃತಿ, ಲೇ.ಪ್ರೊ.ಎಸ್. ಆರ್. ನಾಯಕ, ಪು15), ಎಂಬುದನ್ನು ದ್ವಾಪರನ ಗೋಳು ಅರ್ಥೈಸಿದರೆ, ಭವಿಷ್ಯದದ ಬಗೆಗೆ ಭರವಸೆಯನ್ನು ತುಂಬುವ ಬೆಳಕಾಗಿ ಕಲಿದೇವ ಕಾಣುತ್ತಾನೆ.

"ಆಧುನಿಕ ಯುಗದಲ್ಲಿ ಶ್ರೀರಂಗ, ಕೈಲಾಸಂ ಬಿಟ್ಟರೆ ಇವರಷ್ಟು ವ್ಯಾಪಕವಾಗಿ, ಪರಿಣಾಮಕಾರಿಯಾಗಿ ಈ ಪ್ರಕಾರವನ್ನು ಯಾರೂ ಬಳಸಿಕೊಂಡಿಲ್ಲ'(ಅಭಿಜಾತ ವಿಡಂಬನಕಾರ ಕುವೆಂಪು, ಲೇ, ದೇ. ಜ. ಗೌ). ಈ ನಾಟಕದ ಮೂಲಕ ಕುವೆಂಪು ಅವರು ಮಹಾಭಾರತದ ಯುದ್ಧದ ಉನ್ಮಾದದಲ್ಲಿದ್ದ ಪಾತ್ರಗಳು ಪಶ್ಚಾತಾಪಗೊಂಡು ನಿರಾಳತೆಯನ್ನು ಅನುಭವಿಸುವಂತೆ ಮಾಡಿದ್ದಾರೆ. ಶ್ರೀಸಾಮಾನ್ಯರನ್ನು ತೆರೆಗೆ ತಂದು ಪ್ರಜಾಪ್ರಭುತ್ವದ ಸ್ಥಾಪನೆಯ ಆಶಯ ಮೂಡಿಸುವಲ್ಲಿ ಯಶಸ್ಸು ಕಂಡಿದ್ದಾರೆ. ಸದಾ ಯುದ್ಧಭಿತಿಯಲ್ಲಿರುವ ಜಗತ್ತಿಗೆ ಕುವೆಂಪು ಅವರ ಈ ನಾಟಕವು ಯುದ್ಧಕಾಲ ಮತ್ತು ಯುದ್ಧಾನಂತರದ ಪರಿಣಾಮಗಳ ಪಾಠ ಹೇಳುವ ಕಾರ್ಯವನ್ನು ತಮ್ಮ ಅನನ್ಯವಾದ ಪಾತ್ರಗಳ ಮೂಲಕ ಫಲಪ್ರದವಾಗಿ ನಿರ್ವಹಿಸಿದ್ದಾರೆ.

ಆಕರಗಳು:


1 ಪ್ರತಿ ಸಂಸ್ಕೃತಿ, ರಹಮತ್ ತರೀಕೆರೆ, ಅಭಿನವ ಪ್ರಕಾಶನ, ಬೆಂಗಳೂರು.1993

2 ಕುವೆಂಪು ಒಂದು ಪುನರನ್ವೇಷಣೆ, ಸಂ: ಡಿ.ಎಸ್.ನಾಗಭೂಷಣ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 2005

3 ಕುವೆಂಪು ಸಾಹಿತ್ಯ ಸಂವಾದ, ಸಿಪಿಕೆ, ಪ್ರಸಾರಂಗ, ಮಾನಸ ಗಂಗೋತ್ರಿ, ಮೈಸೂರು. 2012

4 ವಿಮರ್ಶೆಸಂಶೋಧನೆಶಾಸನಸಂಸ್ಕೃತಿ(ಕನ್ನಡ ಐಚ್ಛಿಕ ಪತ್ರಿಕೆ1), ಪ್ರಸಾರಂಗ, ಧಾರವಾಡ, 2017.

5 ಅಭಿಜಾತ ವಿಡಂಬನಕಾರಕುವೆಂಪು, ಲೇ, ದೇ. ಜ. ಗೌ., ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಕವಿಶೈಲ, ಜಯಲಕ್ಷ್ಮಿಪುರಂ, ಮೈಸೂರು.

6 ಶ್ಮಶಾನ ಕುರುಕ್ಷೇತ್ರಂ, ಕುವೆಂಪು.